**ಇಂದು ದಿನಾಂಕ 23.10.2025 ರಂದು ಪಿಡಬ್ಲ್ಯೂ -1 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 2 ಮತ್ತು 5 ನೇ ಪ್ರತಿವಾದಿಯರ ಪರ ವಕೀಲರಿಂದಃ**

**3.** ನಿಪಿ-4 ರ ಪ್ರಕಾರ ದಾವೆ ಹಾಕಿದ್ದೇನೆ ಎಂದರೆ ನಿಜ. ನಿಪಿ-4 ರ ಸರ್ವೆ ನಂಬರ್‌ಗಳನ್ನು ದಾವೆಯಲ್ಲಿ ಸೇರಿಸಿದ್ದೇನೆ. ನಿಪಿ-4 ರ ಪ್ರಕಾರ ದಾವಾ ಷೆಡ್ಯೂಲ್ ಆಸ್ತಿಗಳು ಇಲ್ಲ ಎಂದರೆ ಸರಿಯಲ್ಲ. ಯಾವ ಸರ್ವೆ ನಂಬರ್ ಗಳು ಇವೆ ಹೇಳಿ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಆಸ್ತಿಗಳು ನಾಗಪ್ಪನ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಎಲ್ಲಾ ಆಸ್ತಿಗಳಲ್ಲಿ ನಾವು ಇದ್ದೇವೆ ಎನ್ನುತ್ತಾರೆ. ದಾವಾ ಆಸ್ತಿಗಳಲ್ಲಿ ನಾವು ಸ್ವಾಧೀನದಲ್ಲಿದ್ದೇವೆ ಎಂದು ತೋರಿಸಲು ಪಹಣಿಗಳನ್ನು ಕೊಟ್ಟಿದ್ದೇನೆ. ಪಹಣಿಗಳು ಅವರ ಹೆಸರನಲ್ಲಿ ಇವೆ. ನಾಗಪ್ಪ ಚಿಕ್ಕಬೊಡಮ್ಮನ ಅಳಿಯ ಎಂದರೆ ನಿಜ. ದಾವಾ ಆಸ್ತಿಯ ಪಹಣಿಗಳು ನಾಗಪ್ಪನಿಗೆ ಫಾರಂ ನಂ.8 ಮುಖಾಂತರ ಆಗಿವೆ ಎಂದರೆ ಗೊತ್ತಿಲ್ಲ. ನಿಪಿ-4 ರಲ್ಲಿ ಇರುವ ಆಸ್ತಿಗಳು ಈಗ ನನ್ನ ತಂದೆಯ ಹೆಸರನಲ್ಲಿ ಇವೆ ಮತ್ತು ಸುಬ್ಬಣ್ಣನ ಹೆಸರನಲ್ಲಿ ಇವೆ. ಸುಬ್ಬಣ್ಣ ನನ್ನ ತಾತ. ನಿಪಿ-4 ರ ಸರ್ವೆ ನಂಬರ್‌ಗಳಲ್ಲಿ ನಾವು ಅರ್ಧ ಭಾಗದಲ್ಲಿದ್ದೇವೆ ನಮ್ಮ ಮಾವನವರು ಅರ್ಧ ಭಾಗದಲ್ಲಿದ್ದಾರೆ. ನಿಪಿ-4 ರ ಸರ್ವೆ ನಂಬರ್‌ಗಳಿಗೆ ಸಂಬಂಧಿಸಿದಂತೆ ಪಹಣಿ ಮತ್ತು ಮ್ಯೂಟೇಶನ್‌ನ್ನು ಹಾಜರು ಮಾಡಿದ್ದೀರ ಎಂದರೆ ಮಾರಾಟ ಮಾಡದಿರುವ ಆಸ್ತಿಗಳ ದಾಖಲೆಗಳನ್ನು ಹಾಜರು ಮಾಡಿದ್ದೇನೆ ಎನ್ನುತ್ತಾರೆ. ದಾವೆ ಹಾಕಿರುವ ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ. ಯಾರು ಯಾರಿಗೆ ಮಾರಾಟ ಮಾಡಿದ್ದಾರೆ ಎಂದು ಗೊತ್ತಿಲ್ಲ. ಮಾರಾಟ ಮಾಡಿದ ಬಗ್ಗೆ ದಾಖಲೆಗಳನ್ನು ಹಾಜರು ಮಾಡುತ್ತೇನೆ. ಪ್ರತಿವಾದಿಯರು ನಾಗಪ್ಪನ ಮಕ್ಕಳು. ಚಿಕ್ಕಬೊಡಮ್ಮ ಮಾರಾಟ ಮಾಡಿರುತ್ತಾರ ಎಂದರೆ ಗೊತ್ತಿಲ್ಲ. ಎರಡು ಆಸ್ತಿಗಳನ್ನು ನನ್ನ ತಂದೆ ಮಾರಾಟ ಮಾಡಿದ್ದಾರೆ. ನಾವು ಮಾರಾಟ ಮಾಡಿರುವ ಆಸ್ತಿಗಳಲ್ಲಿ ಪ್ರತಿವಾದಿಯರಿಗೆ ಭಾಗ ಬರಬೇಕು ಎಂದರೆ ಗೊತ್ತಿಲ್ಲ. ನಾವು ಮಾರಾಟ ಮಾಡಿರುವ ಆಸ್ತಿಗಳಲ್ಲಿ ಪ್ರತಿವಾದಿಯರಿಗೆ ಭಾಗ ಕೊಟ್ಟಿಲ್ಲ. ದಾವಾ ಆಸ್ತಿಗಳಲ್ಲಿ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಚಿಕ್ಕಬೊಡಮ್ಮನಿಗೆ ನಾಗಪ್ಪ ಅಳಿಯ. ಚಿಕ್ಕಬೊಡಮ್ಮನ ಅಳಿಯ ನಾಗಪ್ಪನ ಆಸ್ತಿಯಲ್ಲಿ ಭಾಗ ಹೇಗೆ ಬರುತ್ತದೆ ಎಂದರೆ ನನ್ನ ತಾತ ಮೃತರಾದ ನಂತರ ನಾಗಪ್ಪನನ್ನು ಅಳಿಯನನ್ನಾಗಿ ಮಾಡಿಕೊಂಡ ನಂತರ ನಮಗೆ ಹಕ್ಕು ಇದೆ ಎನ್ನುತ್ತಾರೆ. ದಾವಾ ಆಸ್ತಿಗಳು ನಾಗಪ್ಪನ ಸ್ವಯಾರ್ಜಿತ ಆಸ್ತಿಗಳು ನಿಪಿ-4 ರ ಪ್ರಕಾರ ಗ್ರ್ಯಾಂಟ್ ಆದ ಆಸ್ತಿಗಳು ಅಲ್ಲ ಎಂದರೆ ಸರಿಯಲ್ಲ. ನಾಗಪ್ಪನ ಆಸ್ತಿಗಳನ್ನು ಕಬಳಿಸಲು ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.33/2 ಮೂಲತಃ ನಾಗಪ್ಪನ

ಹೆಸರಿನಲ್ಲಿ ಇದೆ ಎಂದರೆ ನಿಜ. ಗ್ರ್ಯಾಂಟ್ ಸರ್ಟಿಫಿಕೇಟ್ ನಲ್ಲಿ ಸರ್ವೆ ನಂ.33/2 ಇಲ್ಲ ಎಂದರೆ ಇದೆ ಎನ್ನುತ್ತಾರೆ. ನಾಗಪ್ಪನ ಹೆಸರಿನಲ್ಲಿರುವ ಜಮೀನನ್ನು ನಿಪಿ-23 ಮತ್ತು ನಿಪಿ-24 ರ ಮೂಲಕ ನನ್ನ ಹೆಸರಿಗೆ ಮಾಡಿಕೊಂಡಿದ್ದೇನೆ ಎಂದರೆ ನಿಜ. ನಿಪಿ-26 ರ ಪ್ರಕಾರ ಸರ್ವೆ ನಂ.33/2 ರಲ್ಲಿ ನಾಗಪ್ಪ ಮತ್ತು ಪುಟ್ಟಪ್ಪನ ಇಬ್ಬರ ಹೆಸರು ಇದೆ ಆ ಆಸ್ತಿಯನ್ನು ದಾವೆಯಲ್ಲಿ ಸೇರಿಸಿದ್ದೀರ ಎಂದರೆ ಇಲ್ಲ ಎನ್ನುತ್ತಾರೆ.

(ಈ ಹಂತದಲ್ಲಿ 2 ಮತ್ತು 5 ನೇ ಪ್ರತಿವಾದಿಯರ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರುತ್ತಾರೆ, ಕಾಲಾವಕಾಶ ನೀಡಿ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು).

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

Sd/-

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**